(ಗೊಂದಲ)

ಉಪಾಧ್ಯಕ್ಷರು : ಈಗ ಸಭೆ ನಡೆಸುವುದಕ್ಕೆ ತಾವು ಸಹಕಾರ ಕೊಡಬೇಕೆಂದು ಕೇಳಿಕೊಂಡಿದ್ದೇನೆ. ಮಾನ್ಯ ಸಚಿವರು ಹೇಳಿದ ಹಾಗೆ. ಪ್ರಶ್ನೋತ್ತರ ವೇಳೆಯು ಬಹಳ ಮುಖ್ಯವಾದ ಕಾಲ ಇದು ಇಡೀ ರಾಜ್ಯದ ಪ್ರಶ್ನೆ. ಪ್ರತಿಯೊಬ್ಬ ಶಾಸಕರೂ ತಮ್ಮ ತಮ್ಮ ಕ್ಷೇತ್ರದ ವಿಷಯಗಳ ಬಗ್ಗೆ, ಸಮಸ್ಯೆಗಳ ಬಗ್ಗೆ ಇಲ್ಲಿ ಚರ್ಚೆಗೆ ತರುತ್ತಾರೆ. ತಾವುಗಳು ಅದಕ್ಕೆ ಅಡ್ಡಿ ಮಾಡುವುದು ಸರಿಯಲ್ಲ. ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಅಫಿಷಿಯಲ್ ಬಿಸಿನೆಸ್ ಆದಮೇಲೆ ತಮಗೆ ಅವಕಾಶವನ್ನು ಮಾಡಿಕೊಡುತ್ತೇನೆಂದು ಮತ್ತೊಮ್ಮೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ದಯವಿಟ್ಟು ತಾವು ಸಹಕಾರ ಕೊಡಬೇಕು. ಹೀಗೆ ಮಾತನಾಡುವುದು ಸರಿಯಲ್ಲ.... ಈಗ ನಾನು ಎನ್.ಜಿ. ನಾಯಕ್‌ರನ್ನು ಕರೆದಿದ್ದೇನೆ. ಅವರು ಸಪ್ಲಿಮೆಂಟರಿ ಪ್ರಶ್ನೆ ಕೇಳುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಹೀಗೆ ಅವರು ಪ್ರಶ್ನೆಗಳಿಗೆ ಉತ್ತರ ಕೊಟ್ಟರೂ ಅದಕ್ಕೆ ಬೆಲೆ ಇದೆಯೇ? ಸರಕಾರದವರು ಕೊಟ್ಟ ಆಶ್ವಾಸನೆಗಳು ಈಡೇರುತ್ತಾ ಇವೆಯೇ?

ಉಪಾಧ್ಯಕ್ಷರು : ರೂಲ್ 330ರ ಪ್ರಕಾರ ತಾವು ನನಗೆ ಸಹಕಾರ ಕೊಡಿ ಎಂದು ಕೇಳುತ್ತಾ ಇದ್ದೇನೆ. ಆದರೂ ತಾವುಗಳು ನನಗೆ ಇಲ್ಲಿ ಕಾರ್ಯಕಲಾಪಗಳನ್ನು ನಡೆಸಲು ಅಡ್ಡಿ ಬರುತ್ತಿದ್ದೀರಿ ಎಂದು ನನಗೆ ಅನ್ನಿಸುತ್ತದೆ. ಆದ್ದರಿಂದ ದಯವಿಟ್ಟು ತಾವು ಈ ಸದನದಿಂದ ವಿತ್‌ಡ್ರಾ ಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ನಿಮ್ಮ ಮಾತಿಗೆ ನಾನು ಗೌರವ ಕೊಡುತ್ತೇನೆ. ಆದರೆ ಈ ಸರ್ಕಾರ ಸಭಾಧ್ಯಕ್ಷರ ಮಾತಿಗೆ ಗೌರವ ಕೊಟ್ಟಿಲ್ಲ. ವಚನಭಂಗ ಮಾಡಿದೆ. ಸಾಲ ಮನ್ನಾ ಮಾಡಿಲ್ಲ.

MADAM DEPUTY SPEAKER : I want you to withdraw from the House ಎಂದು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಈಶ್ವರಪ್ಪ : ಆಯಿತು. ಅಧ್ಯಕ್ಷಿಣಿಯವರೆ. ನಿಮ್ಮ ಮಾತಿಗೆ ಗೌರವ ಕೊಟ್ಟು ಸಭೆಯಿಂದ ಹೊರಗೆಡೆ ಹೋಗುತ್ತಿದ್ದೇನೆ. ಈ ರಾಜ್ಯದ ಯುವಜನರಿಗೆ ಉದ್ಯೋಗ ಕೊಡಲು ಸರ್ಕಾರ ಸಂಪೂರ್ಣ ವಿಫಲವಾಗಿದೆ. ಗ್ರಾನೈಟ್‌ನಲ್ಲಿ ಅನ್ಯಾಯವಾಗಿದೆಯೆಂದು ಕೋರ್ಟಿನಲ್ಲಿ ತೀರ್ಮಾನವಾಗಿದೆ.

ಉಪಾಧ್ಯಕ್ಷಿಣಿಯವರು : ನೀವು ಅಡ್ಡಿಮಾಡುತ್ತಿದ್ದೀರಿ. ನೀವು ಈ ರೀತಿ ಮಾಡಬಾರದು. I want you to withdraw from the House.

ಶ್ರೀ ಕೆ.ಎಸ್. ಈಶ್ವರಪ್ಪ : ಈ ಅಧಿವೇಶನಕ್ಕೇ ಪೂರ್ಣ ಬಹಿಷ್ಕಾರ ಹಾಕುತ್ತೇವೆ.

ಉಪಾಧ್ಯಕ್ಷಿಣಿಯವರು : ಅವರು ಹೋಗುವಾಗ ಮಾತನಾಡಿದ್ದು ಏನೂ ರೆಕಾರ್ಡಿಗೆ ಹೋಗಲಿಕ್ಕೆ ಸಾಧ್ಯವಿಲ್ಲ.

(ಶ್ರೀ ಈಶ್ವರಪ್ಪನವರು ಸಭೆಯಿಂದ ನಿರ್ಗಮಿಸಿದರು)